



ಹೊಸಪೇಟೆಯ ಶ್ಯಾನ್‌ಭೋಗ್ ಸರ್ಕಲ್ ಈಗ 'ಪುನೀತ್ ಸರ್ಕಲ್'! ಇಲ್ಲಿ, ಎಂಟು ಅಡಿ ಎತ್ತರದ ಜಗುಲಿಯ ಮೇಲೆ 7.4 ಅಡಿ ಎತ್ತರದ ಕಂಚಿನ ಪುನೀತ್ ಪ್ರತಿಮೆ ಇದೆ. ಆ ಪ್ರತಿಮೆಗೆ ಅಭಿಮಾನಿಗಳಿಂದ ಪುಷ್ಪಾರ್ಚನೆ, ಪೂಜೆ ಸಲ್ಲುತ್ತದೆ. ಸೆಲ್ಫಿ ತೆಗೆದುಕೊಳ್ಳುವವರೂ ಇಲ್ಲಿ ಕಾಣಿಸುತ್ತಾರೆ.

ಯಾವಾಗ ನೋಡಿದರೂ ಪುನೀತ್ ಪುತ್ಥಳಿ ಸ್ವಚ್ಛವಾಗಿ, ತಾಜಾ ಹೂವಿನ ಹಾರದ ಅಲಂಕಾರದೊಂದಿಗೆ ಕಂಗೊಳಿಸುತ್ತಿರುತ್ತದೆ. ಹೀಗೆ ಅನುದಿನವೂ ಎಲ್ಲರಿಗೂ ಮೊದಲೇ ನಸುಕಿನಲ್ಲಿ ಪುನೀತ್ ಪುತ್ಥಳಿಗೆ ಪೂಜೆಗೈಯುವ ವ್ಯಕ್ತಿ ಉಮೇಶ್ ಎನ್ನುವ ಯುವಕ.

ಉಮೇಶ್ ಹೊಸಪೇಟೆಯ ಚಿತ್ತವಾಡ್ಗಿ ನಿವಾಸಿ. ದಿನವೂ ಬೆಳಗ್ಗೆ ನಾಲ್ಕಕ್ಕೆಲ್ಲ ಎದ್ದು ಸ್ನಾನ ಮಾಡಿ, ಐದು ಐದೂವರೆ ಸುಮಾರಿಗೆ ಪುನೀತ್ ಪ್ರತಿಮೆ ಮುಂದೆ ಇರುತ್ತಾರೆ. ಪ್ರತಿಮೆ ಸುತ್ತ ಕಸ ಗುಡಿಸಿ, ನೀರು ಚಿಮುಕಿಸುತ್ತಾರೆ. ಅಪ್ಪು ಪ್ರತಿಮೆಗೆ ಹಿಂದಿನ ದಿನ ಹಾಕಿದ್ದ ಹೂವಿನ ಹಾರಗಳನ್ನು ತೆಗೆಯುತ್ತಾರೆ. ಸ್ವಲ್ಪ ಹೊತ್ತು ಪ್ರತಿಮೆಯನ್ನು ಬಿಗಿದಪ್ಪಿಕೊಳ್ಳುತ್ತಾರೆ! ಆಮೇಲೆ, ಎರಡು ಲೀಟರ್ ಶುದ್ಧ ನೀರಿನಿಂದ ಪುತ್ಥಳಿ ತೊಳೆದು, ಶುಭ್ರ ಬಟ್ಟೆಯಿಂದ ಒರೆಸಿ, ಹೂವಿನ ಹಾರ ಹಾಕಿ, ಗಂಧದ ತಿಲಕ ಇಟ್ಟು, ಕುಂಕುಮ, ಪುಷ್ಪಾರ್ಚನೆ ಮಾಡಿ, ಕಾಯಿ ಒಡೆದು, ಊದಿನಕಡ್ಡಿ ಬೆಳಗುತ್ತಾರೆ. ಹೋಟೆಲ್‌ನಿಂದ ಏನಾದರೊಂದು ತಿಂಡಿ ತಂದು ಎಡೆ ಇಡುತ್ತಾರೆ. ಅಭಿಮಾನಿಗಳು ಬಂದರೆ ಅವರಿಗೆ ಪ್ರಸಾದ ಹಂಚುತ್ತಾರೆ. ಯಾರೂ ಸಿಗದಿದ್ದರೆ ತಾವೇ ಪ್ರಸಾದ ಸೇವಿಸಿ, ದೈನಂದಿನ ಕೆಲಸಕ್ಕೆ ಹೊರಡುತ್ತಾರೆ! ವ್ಯಾಪಾರ ಮುಗಿಸಿ, ರಾತ್ರಿ ಮನೆಯ ದಾರಿ ಹಿಡಿಯುವ ಮುನ್ನ ಪುನಃ ಬಂದು ನಮಸ್ಕರಿಸುತ್ತಾರೆ. ಅಮಾವಾಸ್ಯೆ, ಹುಣ್ಣಿಮೆಗಳಂದು ಕ್ಷೀರಾಭಿಷೇಕ ಮಾಡುತ್ತಾರೆ.

ಉಮೇಶ್ ಅವರದು ತಳ್ಳುವ ಬಂಡಿಯಲ್ಲಿ ತರಕಾರಿ ಮಾರುವ ಉದ್ಯೋಗ. ಕುಟುಂಬದ ಸ್ಥಿತಿ ಉತ್ತಮವಾಗಿಲ್ಲದಿದ್ದರೂ ಅವರ ಪುನೀತ್ ಪ್ರೀತಿಗೆ ಕೊಂಚವೂ ಮುಕ್ಕಾಗಿಲ್ಲ. ನೆಚ್ಚಿನ ನಟನ ಆರಾಧನೆಗೆಂದು ನಿತ್ಯ 600ರಿಂದ 800 ರೂಪಾಯಿ ಖರ್ಚು ಮಾಡುತ್ತಾರೆ. 'ನಾನು ಬಡವ. ಆದರೆ ಅಪ್ಪು ಮೇಲಿನ ಅಭಿಮಾನಕ್ಕೆ ನನ್ನಲ್ಲಿ ಬಡತನವಿಲ್ಲ. ಎಷ್ಟೇ ಕಷ್ಟ ಆದರೂ ಕೊನೆ ಉಸಿರು ಇರುವವರೆಗೂ ಪೂಜೆ ನಿಲ್ಲಿಸುವುದಿಲ್ಲ' ಎನ್ನುತ್ತಾರೆ.

'ಜೊತೆಗಿರದ ಜೀವ ಎಂದಿಗೂ ಜೀವಂತ... ಎನ್ನುವಂತೆ ಅಪ್ಪು ಲಕ್ಷಾಂತರ ಜನರಿಗೆ ಸಹಾಯ ಮಾಡಿದವರು. ಸಾವಿನ ನಂತರವೂ ಅವರು ನನ್ನೊಳಗೆ, ನನ್ನೊಂದಿಗೆ ಸದಾ ಇದ್ದು, ನನ್ನ ಕಷ್ಟಸುಖಗಳಿಗೆ ಬೆನ್ನೆಲುಬಾಗಿದ್ದಾರೆ' ಎನ್ನುವ ನಂಬಿಕೆ ಅವರದು.

ಪುನೀತ್ ಪೂಜೆಗೆ ದಿನವೂ ದುಡ್ಡು ಹೊಂದಿಸುವುದು ಕಷ್ಟ ಆಗೋದಿಲ್ಲವೇ ಎಂದು ಪ್ರಶ್ನಿಸಿದರೆ, 'ವ್ಯಾಪಾರ ಇಲ್ಲದಾಗ ಸಾಲ ಮಾಡ್ತೀನಿ. ಒಮ್ಮೊಮ್ಮೆ ವ್ಯಾಪಾರ ಚೆನ್ನಾಗಿ ಆಗಿ ಇರೋಬರೋ



ಕ್ಷೀರಾಭಿಷೇಕದ 'ಪುನೀತ' ಕ್ಷಣ

ಸಾಲ ತೀರಿಹೋಗುತ್ತೆ. ಸ್ವರ್ಗದಲ್ಲಿರುವ ಪುನೀತ್ ಸರ್ ಎಲ್ಲಾ ನೋಡಿಕೊಳ್ತಾರೆ. ಯಾವುದೋ ರೂಪದಲ್ಲಿ ಕೈಹಿಡಿಯುತ್ತಿದ್ದಾರೆ' ಎಂದು ಆಕಾಶ ನೋಡುತ್ತಾರೆ.

''ನಿಮಗೆ ಒಂದು ಘಟನೆ ಹೇಳ್ತೀನೆ. ನಂಬೋದು ಬಿಡೋದು ನಿಮಗೆ ಬಿಟ್ಟಿದ್ದು. ಈ ಮೊದ್ಲು ನಾನು ಕುರಿ ವ್ಯಾಪಾರ ಮಾಡ್ತಿದ್ದೆ. ಅರ್ಜೆಂಟ್ ಆಗಿ ಕುಕ್ಕನಹಳ್ಳಿ ಸಂತೆಗೆ ಹೋಗ್ಬೇಕಿತ್ತು. ಅಂದು ಪೂಜೆ ಮಾಡದೇ ಹೋಗಿಬಿಟ್ಟೆ. ಕುರಿಗಳನ್ನು ಖರೀದಿಸಿ, ಹಗರಿಬೊಮ್ಮನಹಳ್ಳಿ ಸಂತೆಗೆ ಮಾರಲು ಹೋದೆ. ಹೊತ್ತು ಮುಳುಗಲಿಕ್ಕೆ ಬಂದ್ರೂ ಬಿಡಿಗಾಸು ವ್ಯಾಪಾರವೂ ಆಗಿರಲಿಲ್ಲ. ಅಪ್ಪು ಪೂಜೆ ಮಾಡದೇ ಬಂದಿದ್ದಕ್ಕೆ ಈ ಶಿಕ್ಷೆ ಅನ್ನಿಸಿ, ಮನಸ್ಸಿಗೆ ಕಸಿವಿಸಿಯಾಯಿತು. 'ಅಪ್ಪು ಸರ್ ತಪ್ಪಾಯ್ತು, ಕ್ಷಮಿಸಿ...' ಅಂತಾ ಕಣ್ಣುಮುಚ್ಚಿ ಕೇಳಿಕೊಂಡೆ. ಸ್ವಲ್ಪ ಸಮಯದ ನಂತರ ಅಚ್ಚರಿ ಕಾದಿತ್ತು. ಗ್ರಾಹಕರು ಬಂದು, ನಾನು ಹೇಳಿದ ರೇಟಿಗೇ ಕುರಿಗಳನ್ನೆಲ್ಲಾ ಖರೀದಿಸಿಬಿಟ್ರು. ಅವತ್ತು ಹತ್ತು ಸಾವಿರ ಲಾಭ ಆಯ್ತು'. ಹಳೆಯ ಘಟನೆ ನೆನಪಿಸಿಕೊಂಡು ಕಣ್ಣು ತುಂಬಿಕೊಂಡರು ಉಮೇಶ್.

'ಅಪ್ಪು ಸರ್ ಸಾವಿನ ಸುದ್ದಿ ಬರಸಿಡಿಲಿನಂತೆ ಎರಗಿದಾಗ ನಾನು ನಾನಾಗಿರಲಿಲ್ಲ. ಊಟ ಸೇರ್ತಿರಲಿಲ್ಲ. ನಿದ್ದೆ ಬರ್ತಿರಲಿಲ್ಲ. ಅಪ್ಪು ನೆನಪಿನಲ್ಲಿ ಕೊರಗಿ ಕೊರಗಿ ದಿನ ಕಳೆಯುವ ಬದಲು ಅವರನ್ನು ಆರಾಧಿಸುತ್ತಾ, ಆ ದೇವ್ರು ತೋರಿಸಿದ ಹಾದಿಯಲ್ಲಿ ನಡೆಯುವ ತೀರ್ಮಾನ ಮಾಡಿದೆ. ಯಾರೇ ಕೈ ಬಿಟ್ಟರೂ ಹೊಸಪೇಟೆ ಜನ ನಮ್ಮನ್ನೆಂದೂ ಬಿಡಲ್ಲ ಎಂದು ಅವರು ಹೇಳಿದ್ದು ನನ್ನನ್ನು ಹೆಚ್ಚು ಕಾಡಿತು...' ಎಂದರು ಉಮೇಶ್.

ಪುತ್ಥಳಿ ನಿರ್ಮಾಣಕ್ಕಿಂತ ಮುಂಚೆ ಅದೇ ವೃತ್ತದಲ್ಲಿ ಒಂದೆಡೆ, ಪುನೀತ್ ಬ್ಯಾನರ್ ಕಟ್ಟಿ ಅದಕ್ಕೆ ನಿತ್ಯ ಪೂಜೆ ಸಲ್ಲಿಸುತ್ತಿದ್ದರು. ಕೆಲವರು 'ಇವನು ಹುಚ್ಚು ಅಭಿಮಾನಿ. ಮಾಡಲಿಕ್ಕೆ ಬೇರೆ ಕೆಲಸವಿಲ್ಲ' ಅಂತಲೂ, ಮತ್ತೊಂದಿಷ್ಟು ಮಂದಿ 'ಯಾರೋ ಈತನಿಗೆ ಕೆಲಸಕ್ಕೆ ನೇಮಿಸಿ, ಸಂಬಳ ಕೊಡುತ್ತಿದ್ದಾರೆ' ಎಂದೂ ಹೇಳುತ್ತಿದ್ದರು. 'ಒಳ್ಳೆಯ ಕೆಲಸ ಮಾಡ್ತಿದ್ದೀಯಾ, ನಿನಗೆ ಒಳ್ಳೆಯದಾಗುತ್ತದೆ' ಎಂದವರೂ ಇದ್ದರು. 'ಜನ ಈಗಲೂ ಏನೇನೋ ಮಾತನಾಡುತ್ತಾರೆ. ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳುವವನಲ್ಲ ನಾನು. ಅಪ್ಪು ಸರ್ ನಟನೆ, ಪರೋಪಕಾರಿ ಗುಣ, ಸರಳ ಜೀವನ ನನ್ನ ಹೃದಯ ಗೆದ್ದಿದೆ. ಹಾಗಾಗಿ ನಾನು ಅವರನ್ನು ಆರಾಧಿಸುತ್ತಿರುವೆ. ಇದಷ್ಟೇ ಸತ್ಯ ಮತ್ತು ವಾಸ್ತವ' ಎಂದು ಹೇಳುವಾಗ ಉಮೇಶ್ ಅವರಿಗೆ ಅಳು ತಡೆದುಕೊಳ್ಳಲಾಗಲಿಲ್ಲ.

ಆರಂಭದಲ್ಲಿ ಉಮೇಶ್ ಕುಟುಂಬದವರು ಪುನೀತ್ ಪೂಜಾ ಕೈಂಕರ್ಯಕ್ಕೆ ಅಡ್ಡಿಪಡಿಸಿದ್ದರು. ಈಗ ಮನೆಯವರೂ ಅಭಿಮಾನದ ಆರಾಧನೆಗೆ ಕೈಜೋಡಿಸಿದ್ದಾರೆ. ಉಮೇಶ್ ಹೆಂಡತಿ ನೇತ್ರಾ ಅವರು, ತಮ್ಮ ಪತಿ ಇಲ್ಲದೆ ಇರುವಾಗ ಪೂಜಿಸುವ ಜವಾಬ್ದಾರಿ ನಿರ್ವಹಿಸುತ್ತಾರೆ. 'ಪುನೀತ್ ಪೂಜಾ ಕೆಲಸದಿಂದ ನನ್ನ ಗಂಡನಿಗೆ ಆನಂದ ಸಿಕ್ಕಿರುವುದು ಮಾತ್ರವಲ್ಲ, ನಮ್ಮ ಮನೆಯಲ್ಲೂ ನೆಮ್ಮದಿ–ಶಾಂತಿ ನೆಲೆಸಿದೆ' ಎನ್ನುತ್ತಾರೆ ನೇತ್ರಾ.

ಉಮೇಶ್ ತನ್ನ ಎದೆಗೆ ಪುನೀತ್‌ರ ಭಾವಚಿತ್ರ ಹಚ್ಚೆ ಹಾಕಿಸಿಕೊಂಡಿದ್ದಾರೆ. ಹೊಸಪೇಟೆಯಿಂದ ಬೆಂಗಳೂರಿಗೆ ಸೈಕಲ್‌ನಲ್ಲಿ ತೆರಳಿ, ಅಪ್ಪು ಸಮಾಧಿ ದರ್ಶನ ಪಡೆದಿದ್ದಾರೆ. ರಾಜ್‌ಕುಮಾರ್ ಕುಟುಂಬದವರನ್ನು ಭೇಟಿ ಮಾಡಿ ಬಂದಿದ್ದಾರೆ! ಸ್ವಂತ ತಂದೆ ತೀರಿಕೊಂಡಾಗಲೂ ಅವರು ಪುನೀತ್ ಪೂಜೆ ನಿಲ್ಲಿಸಿರಲಿಲ್ಲ. ಪ್ರತಿ ವರ್ಷ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಹೊಸಪೇಟೆಯಲ್ಲಿ 'ಸೈಕಲ್ ಸ್ಪರ್ಧೆ' ನಡೆಯುತ್ತದೆ. ಆ ಸ್ಪರ್ಧೆಯಲ್ಲಿ ತಪ್ಪದೇ ಭಾಗವಹಿಸುತ್ತಿದ್ದ ಉಮೇಶ್, ಪುನೀತ್ ಪೂಜೆಗೆ ತೊಂದರೆಯಾಗುತ್ತದೆ ಎನ್ನುವ ಕಾರಣದಿಂದಾಗಿ ಕಳೆದ ವರ್ಷ ಸ್ಪರ್ಧೆಯಲ್ಲಿ ಭಾಗವಹಿಸಿಲ್ಲ.

ಪೂಜೆ ಮಾತ್ರವಲ್ಲ, ಪುನೀತ್ ಹೆಸರಿನಲ್ಲಿ ಸಮಾಜಮುಖಿ ಕೆಲಸದಲ್ಲೂ ಉಮೇಶ್ ನಿರತರು. ಹೊಸಪೇಟೆ ನಗರ ಸಭೆಯ ಮುಂದೆ ಫುಟ್‌ಪಾತ್‌ನಲ್ಲಿ ಪುನೀತ್ ಹೆಸರಿನಲ್ಲಿ ಕುಡಿಯುವ ನೀರಿನ ಅರವಟ್ಟಿಗೆ ತೆರೆದು, ವರ್ಷವಿಡೀ ಅದರ ನಿರ್ವಹಣೆ ಮಾಡುತ್ತಿದ್ದಾರೆ.

ಉಮೇಶ್ ಅವರನ್ನು ನೋಡಿದಾಗ, 'ಅಭಿಮಾನಿಗಳೇ ನಮ್ಮನೆ ದೇವ್ರು' ಎನ್ನುವ 'ದೊಡ್ಮನೆ ಹುಡ್ಗ' ಸಿನಿಮಾದ ಹಾಡು ಜೀವತಾಳಿದಂತೆ ಭಾಸವಾಗುತ್ತದೆ.

**ಉಮೇಶ್ ಅವರ ಸಂಪರ್ಕ ಸಂಖ್ಯೆ: 8749093348**

**ಪ್ರತಿಕ್ರಿಯಿಸಿ: feedback@sudha.co.in**